ಪರವಾನಗಿ ನೀಡಲಾಗಿದೆ.

ಅ) ಈ ಫ್ಯಾಕ್ಟರಿಗಳಲ್ಲಿ ಎಷ್ಟು ಕಾರ್ಖಾನೆಗಳು ಸಿಮೆಂಟ್ ಉತ್ಪತ್ತಿ ಮಾಡುತ್ತಿವೆ.

ಇ) ಸಿಮೆಂಟ್ ಉತ್ಪತ್ತಿ ಮಾಡದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕೆ ಸಚಿವರು):

ಅ) 14 ಮಿನಿ ಸಿಮೆಂಟ್ ಘಟಕಗಳಿಗೆ 1980 1983ರ ಅವಧಿಯಲ್ಲಿ ಲೈಸನ್ಸ್ ನೀಡಲಾಗಿದೆ.

ಆ) ಯಾವ ಘಟಕವು ಉತ್ಪಾದನೆ ಮಾಡುತ್ತಿಲ್ಲ.

ಇ) ತಾಂತ್ರಿಕ ದೋಷದಿಂದ.

ತುಮಕೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಕಲುಷಿತ ನೀರು.

320(564)

ಶ್ರೀ ಶಿವಣ್ಣ (ತುಮಕೂರು): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಕಲುಷಿತ ನೀರು ಸರಬರಾಜಿನಿಂದ ವಿದ್ಯಾರ್ಥಿನಿಯರು ವಾಂತಿ ಭೇದಿಯಿಂದ ಅಸ್ವಸ್ಥರಾಗಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಪರಿಶೀಲಿಸಲಾಗಿದೆಯೇ? ಮತ್ತು ಇದಕ್ಕೆ ಕಾರಣವೇನು?

ಇ) ನಿರ್ಲಕ್ಷ್ಯ ತೋರಿದ ನಿಲಯಪಾಲಕರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ?

ಈ) ಎಷ್ಟು ಜನ ವಿದ್ಯಾರ್ಥಿನಿಯರು ಈ ತೊಂದರೆಯಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು, ವಿವರಣೆ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) ಪರಿಶೀಲಿಸಲಾಗಿದೆ. ವಿದ್ಯಾರ್ಥಿನಿಲಯದ ಮುಂಭಾಗದ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ನಡೆಯುತ್ತಿದ್ದು ಚರಂಡಿ ನೀರು ಹರಿದು ಹೋಗಲು ಬಿಡದಂತೆ ಒಂದೆಡೆ ತಡೆಹಿಡಿದಿದ್ದು, ಇದರಿಂದಾಗಿ ಚರಂಡಿ ನೀರು ಒಂದೇ ಕಡೆ ನಿಂತು ಆ ಪ್ರದೇಶದಲ್ಲಿನ ಬೋರ್‌ವೆಲ್‌ಗಳಿಗೆ ಸೇರಿ ನೀರು ಕಲುಷಿತಗೊಂಡಿರುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿರುವ ಮಾರ್ಗದರ್ಶನದಂತೆ, ವಿದ್ಯಾರ್ಥಿನಿಲಯದಲ್ಲಿರುವ ಬೋರ್‌ವೆಲ್ ಮತ್ತು ಎದುರುಗಡೆ ಕಾಂಪೌಂಡ್‌ನಲ್ಲಿರುವ ಬೋರ್‌ವೆಲ್ ನೀರನ್ನು ಶೇಖರಿಸಿ ಬೆಂಗಳೂರಿನಲ್ಲಿರುವ ಸಾಮಾನ್ಯ ಆರೋಗ್ಯ ಪ್ರಯೋಗಾಲಯದ ಘಟಕಕ್ಕೆ ಪರಿಶೀಲನೆಗೆ ಕಳುಹಿಸಿಕೊಡಲಾಗಿತ್ತು. ದಿನಾಂಕ 17-1-2001ರಂದು ಜಿಲ್ಲಾ ಪ್ರಯೋಗಾಲಯದ ವೈದ್ಯಾಧಿಕಾರಿಗಳು ಕಳುಹಿಸಿರುವ ವರದಿಯಲ್ಲಿ ಸದರಿ ಬೋರ್‌ವೆಲ್‌ಗಳ ನೀರು ಕುಡಿಯಲು ಯೋಗ್ಯವಲ್ಲವೆಂದು ವರದಿ ನೀಡಿರುತ್ತಾರೆ. ಪುನಃ ನೀರನ್ನು ಮತ್ತೊಮ್ಮೆ ಪರಿಶೀಲನೆಗೆ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗಿತ್ತು. ಇದರ ವರದಿಯ ಪ್ರಕಾರ ನೀರು ಕುಡಿಯಲು ಯೋಗ್ಯವಲ್ಲವೆಂದು ವರದಿಯಲ್ಲಿ ತಿಳಿಸಲಾಗಿದೆ.

ವಿದ್ಯಾರ್ಥಿನಿಲಯದಲ್ಲಿರುವ ಬೋರ್‌ವೆಲ್ ನೀರನ್ನು ಕುಡಿಯಲು ಉಪಯೋಗಿಸುವುದನ್ನು ತಪ್ಪಿಸಿ, ಹೊಸದಾಗಿ ಕೊಳಾಯಿ ಸಂಪರ್ಕ ಪಡೆದು ಮುನ್ಸಿಪಲ್ ನೀರು ಸರಬರಾಜು ಮಾಡುವ ವ್ಯವಸ್ಥೆ ಮಾಡಲಾಗಿದೆ.

ಇ) ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಈ ತೊಂದರೆಯಿಂದ ದಿನಾಂಕ 2-1-2001ರಂದು 11 ವಿದ್ಯಾರ್ಥಿನಿಯರು ಮತ್ತು ದಿನಾಂಕ 3-1-2001ರಂದು 6 ವಿದ್ಯಾರ್ಥಿನಿಯರು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು. ಎಲ್ಲರೂ ಗುಣಮುಖರಾಗಿರುತ್ತಾರೆ.

ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣದಲ್ಲಿ ಒಳಚರಂಡಿ ಸಮಸ್ಯೆಗಳು.

322(566)

ಶ್ರೀ ಎನ್.ಸಂಪಂಗಿ (ಬಾಗೇಪಲ್ಲಿ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾಗೇಪಲ್ಲಿ ಹಾಗೂ ಗುಡಿಬಂಡೆ ಪಟ್ಟಣದಲ್ಲಿ ಒಳಚರಂಡಿಗಳ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?